ನೀವು ಆನಂದದಿಂದ ಇರಬೇಕಾದರೆ ಇತರರ ಸುಖ ಆವಶ್ಯಕವಾಗುವ ಸ್ಥಿತಿಯನ್ನೇ ಪ್ರೀತಿ ಎಂದು ಕರೆಯುವುದು. — **ಆರ್. ಎ. ಹೀನ್‌ಲೀನ್**

ಆತ್ಮವಿಶ್ವಾಸವು ಮೂಡುವುದು ಯಾವಾಗಲೂ ಸರಿಯಾಗಿರುವುದರಿಂದಲ್ಲ, ಆದರೆ ತಪ್ಪಾಗುವುದೆಂಬ ಭಯ ಇಲ್ಲದಾಗ. — **ಪೀಟರ್. ಟಿ. ಮ್ಯಾಕಿಂಟೈರ್ (Peter. T. Mc Intyre).**

ನಿಮ್ಮ ಬಯಕೆಯನ್ನೇ ನೀವು ಮರೆಯುವವರೆಗೂ, ಅದು ಭಗವದಿಚ್ಛೆಯಲ್ಲಿ ಲಯವಾಗುವವರೆಗೂ ಪ್ರಾರ್ಥಿಸಿ.— **ಫ್ರೆಡರಿಕ್ ಡಬ್ಲ್ಯೂ. ರಾಬರ್ಟ್‌ಸನ್ (Frederick W. Robertson).**

ಮಾನವನು ಪ್ರಾರ್ಥಿಸುತ್ತಿರುವಾಗ ಉಂಟಾಗುವ ಹೃದಯದ ಕಾವಿನಲ್ಲಿ ಭಗವಂತನು ಕೈಕಾಸಿಕೊಳ್ಳುವನು. — **ಜಾನ್ ಮೇಸ್‌ಫೀಲ್ಡ್ (John Masefield).**

ವ್ಯಕ್ತಿಯು ಜೀವನದಲ್ಲಿ ಏರಿರುವ ಸ್ಥಾನದ ಆಧಾರದ ಮೇಲೆ ಯಶಸ್ಸನ್ನು ಅಳೆಯಬಾರದು, ಅವನು ಯಶಸ್ಸನ್ನು ಪಡೆಯಲು ಎದುರಿಸಬೇಕಾದ ವಿಘ್ನಗಳ ಆಧಾರದ ಮೇಲೆ ಅದನ್ನು ಅಳೆಯಬೇಕು. —**ಬೂಕರ್. ಟಿ. ವಾಷಿಂಗ್‌ಟನ್.**

ಗಂಧ, ಮಲ್ಲಿಗೆ, ಗುಲಾಬಿಗಳ ಸುವಾಸನೆ ಗಾಳಿ ಚಲಿಸುವಷ್ಟು ದೂರ ಮಾತ್ರ ಹೋಗುತ್ತದೆ. ಆದರೆ ಒಳ್ಳೆಯತನದ ಮತ್ತು ದಯೆಯ ಸುವಾಸನೆಯು ಜಗತ್ತಿನಾದ್ಯಂತ ಹರಡುತ್ತದೆ. ಪುಷ್ಪಗಳಿಂದ ಹೂಮಾಲೆ ಮಾಡುವಂತೆ ನಿಮ್ಮ ಜೀವನ ಸತ್ಕಾರ್ಯಗಳ ಹೂಮಾಲೆಯಾಗಲಿ. — **ಬುದ್ಧ.**

ಭೌತಿಕ ಪ್ರಮಾಣಕ್ಕಾಗಿ ಒತ್ತಾಯಿಸುತ್ತ ಇತರರ ನಂಬಿಕೆಯನ್ನು ಕೆಡಿಸುವುದಕ್ಕೆ ಯಾರಿಗೂ ಅಧಿಕಾರವಿಲ್ಲ. — **ಖಲೀಲ್ ಗಿಬ್ರಾನ್.**

ಒಂದು ಬೇಲಿಯನ್ನು ಅದು ಯಾತಕ್ಕಾಗಿ ಕಟ್ಟಲ್ಪಟ್ಟಿದೆ ಎಂಬುದನ್ನು ತಿಳಿಯದೆ, ಕಿತ್ತು ಹಾಕಬೇಡಿ. — **ರಾಬರ್ಟ್ ಫ್ರಾಸ್ಟ್.**

ಎಲ್ಲ ವಿಷಯಗಳಲ್ಲಿಯೂ ತಾಳ್ಮೆಯಿಂದಿರಿ, ಆದರೆ ಮುಖ್ಯವಾಗಿ ನಿಮ್ಮ ವಿಷಯದಲ್ಲಿ. ನಿಮ್ಮ ಅಪರಿಪೂರ್ಣತೆಗಳನ್ನು ಕಂಡು ಧೈರ್ಯಗೆಡಬೇಡಿ, ಬದಲು ಕೂಡಲೆ ಅದನ್ನು ಹೋಗಲಾಡಿಸಲು ಪ್ರಯತ್ನಿಸಿ. ಪ್ರತಿದಿನವೂ ಹೊಸದಾಗಿ ಕಾರ್ಯವನ್ನು ಪ್ರಾರಂಭಿಸಿ. — **ಸೇಂಟ್ ಫ್ರಾನ್ಸಿಸ್ ಡಿ. ಸೇಲ್ಸ್ (St.Francis De Sales).**

## "ಶ್ರೀ ರಾಮರಕ್ಷಾಸ್ತೋತ್ರ" ದಿಂದ

ರಾಮಂ ಲಕ್ಷ್ಮಣಪೂರ್ವಜಂ ರಘುವರಂ ಸೀತಾಪತಿಂ ಸುಂದರಂ ।
ಕಾಕುತ್ಸ್ಥಂ ಕರುಣಾರ್ಣವಂ ಗುಣನಿಧಿಂ ವಿಪ್ರಪ್ರಿಯಂ ಧಾರ್ಮಿಕಮ್ ॥
ರಾಜೇಂದ್ರಂ ಸತ್ಯಸಂಧಂ ದಶರಥತನಯಂ ಶ್ಯಾಮಲಂ ಶಾಂತಮೂರ್ತಿಂ
ವಂದೇ ಲೋಕಾಭಿರಾಮಂ ರಘುಕುಲತಿಲಕಂ ರಾಘವಂ ರಾವಣಾರಿಮ್ ॥೧॥

ಸುಂದರನೂ, ಕರುಣಾಸಾಗರನೂ, ಗುಣನಿಧಿಯೂ, ಧಾರ್ಮಿಕನೂ, ರಾಜಶ್ರೇಷ್ಠನೂ, ಸತ್ಯಪ್ರತಿಜ್ಞನೂ, ಶ್ಯಾಮವರ್ಣನೂ, ಶಾಂತಮೂರ್ತಿಯೂ, ಜನರಿಗೆ ಆನಂದಕರನೂ, ರಾವಣ ವೈರಿಯೂ, ಕಕುತ್ಸ್ಥ ವಂಶದಲ್ಲಿ ಜನಿಸಿದವನೂ, ರಘುಕುಲಶ್ರೇಷ್ಠನೂ, ಕುಲಭೂಷಣನೂ, ದಶರಥಪುತ್ರನೂ, ಲಕ್ಷ್ಮಣನ ಅಗ್ರಜ (ಅಣ್ಣ)ನೂ, ಸೀತಾಪತಿಯೂ ಆದ ಶ್ರೀರಾಮನಿಗೆ ನಾನು ನಮಸ್ಕರಿಸುವೆ.

ಶ್ರೀರಾಮಚಂದ್ರ-ಚರಣೌ ಮನಸಾ ಸ್ಮರಾಮಿ
ಶ್ರೀರಾಮಚಂದ್ರ-ಚರಣೌ ವಚಸಾ ಗೃಣಾಮಿ ।
ಶ್ರೀರಾಮಚಂದ್ರ-ಚರಣೌ ಶಿರಸಾ ನಮಾಮಿ
ಶ್ರೀರಾಮಚಂದ್ರ-ಚರಣೌ ಶರಣಂ ಪ್ರಪದ್ಯೇ ॥೨॥

ಶ್ರೀರಾಮಚಂದ್ರನ ಚರಣಗಳನ್ನು ಮನಸ್ಸಿನಿಂದ ಸ್ಮರಿಸುವೆನು. ಶ್ರೀರಾಮಚಂದ್ರನ ಚರಣಗಳನ್ನು ವಾಣಿಯಿಂದ ವರ್ಣಿಸುವೆನು. ಶ್ರೀರಾಮಚಂದ್ರನ ಚರಣಗಳ ಮೇಲೆ ಮಸ್ತಕವನ್ನಿಟ್ಟು ನಮಸ್ಕರಿಸುವೆನು. ಈ ವಿಧವಾಗಿ ಶ್ರೀರಾಮಚಂದ್ರನ ಚರಣಗಳಿಗೆ ಶರಣಾಗತನಾಗುವೆ.

ಮಾತಾ ರಾಮೋ ಮತ್ಪಿತಾ ರಾಮಚಂದ್ರಃ
ಸ್ವಾಮೀ ರಾಮೋ ಮತ್ಸಖಾ ರಾಮಚಂದ್ರಃ ।
ಸರ್ವಸ್ವಂ ಮೇ ರಾಮಚಂದ್ರೋ ದಯಾಲು-
ರ್ನಾನ್ಯಂ ಜಾನೇ ನೈವ ಜಾನೇ ನ ಜಾನೇ ॥೩॥

ನನ್ನ ತಾಯಿ, ತಂದೆ, ಒಡೆಯ ಮತ್ತು ಮಿತ್ರನು ಶ್ರೀರಾಮಚಂದ್ರನಾಗಿರುವನು, ದಯಾಳುವಾದ ರಾಮಚಂದ್ರನೇ ನನ್ನ ಸರ್ವಸ್ವವು. ನಿಜವಾಗಿ ಈ ಜಗತ್ತಿನಲ್ಲಿ ಅವನನ್ನಲ್ಲದೆ ಅನ್ಯವಾವುದನ್ನೂ ನಾನರಿಯೆ, ಕಿಂಚಿತ್ತಾದರೂ ಅರಿಯೆ.

ರಾಮೋ ರಾಜಮಣಿಃ ಸದಾ ವಿಜಯತೇ ರಾಮಂ ರಮೇಶಂ ಭಜೇ ।
ರಾಮೇಣಾಭಿಹತಾ ನಿಶಾಚರಚಮೂ ರಾಮಾಯ ತಸ್ಮೈ ನಮಃ ॥
ರಾಮಾನ್ನಾಸ್ತಿ ಪರಾಯಣಂ ಪರತರಂ ರಾಮಸ್ಯ ದಾಸೋಽಸ್ಮ್ಯಹಂ ।
ರಾಮೇ ಚಿತ್ತಲಯಃ ಸದಾ ಭವತು ಮೇ ಭೋ ರಾಮ ಮಾಮುದ್ಧರ ॥೪॥

ರಾಜರತ್ನವೆನಿಸಿದ ರಾಮನಿಗೆ ಯಾವಾಗಲೂ ಜಯವಿರಲಿ. ನಾನು ರಮೆಯ ಈಶ (ಸೀತಾಪತಿ)ನಾದ ರಾಮನನ್ನು ಭಜಿಸುವೆ. ರಾಮನಿಂದ ರಾಕ್ಷಸಸೈನ್ಯವು ಕೊಲ್ಲಲ್ಪಟ್ಟಿತು. ಅಂತಹ ರಾಮನಿಗೆ ನಮಸ್ಕಾರವು. ರಾಮನಿಗಿಂತ ದೊಡ್ಡ ಯಾವುದೇ ಆಶ್ರಯವಿಲ್ಲ. ಆ ರಾಮಚಂದ್ರನಿಗೆ ನಾನು ದಾಸನಾಗಿರುವೆ. ನನ್ನ ಚಿತ್ತವು ಯಾವಾಗಲೂ ರಾಮನಲ್ಲಿ ಲೀನವಾಗಿರಲಿ. ಎಲೈ ರಾಮನೆ! ನೀನು ನನ್ನನ್ನು ಉದ್ಧರಿಸು.